 

## ಚಟುವಟಿಕೆ 2: ವಾಹನವನ್ನು ರಚಿಸುವುದು

**ವಯಸ್ಸು:** ಮಕ್ಕಳು ಮತ್ತು ವಯಸ್ಕರು ಈ ಚಟುವಟಿಕೆಗಳನ್ನು ಪ್ರಯತಿನಿಸಬಹುದು.

**ಅಗತ್ಯ ವಸ್ತುಗಳು:** ಮಡಿಕೆಗಳು, ಹರಿವಾಣಗಳು, ಪಾತ್ರೆಗಳು, ಬಾಟಲಿಗಳು, ಬಾಟಲ್ ಕ್ಯಾಪ್‌ಗಳು, ರಟ್ಟಿನ ಪೆಟ್ಟಿಗೆ, ಚೀಲಗಳು, ಹಳೆಯ ಪುಸ್ತಕಗಳು, ಪತ್ರಿಕೆಗಳು, ಹಿಟ್ಟು, ಮರುಬಳಕೆ ಮಾಡಬಹುದಾದ ವಸ್ತುಗಳು, ಅಲ್ಯೂಮಿನಿಯಂ ಪೇಪರ್ ಗಳು , ಇತ್ಯಾದಿ.

**ಹಂತಗಳು:**

1. ನಿಮ್ಮ ನೆಚ್ಚಿನ ವಾಹನವನ್ನು 3D ಯಲ್ಲಿ ರಚಿಸಲು ನಿಮ್ಮ ಮನೆಯ ಸುತ್ತ-ಮುತ್ತ ಸಿಗುವ ಕನಿಷ್ಠ 5 ವಸ್ತುಗಳನ್ನು ಹುಡುಕಿ.
2. ನೀವು ನೋಡಿದ ಎಲ್ಲಾ ವಾಹನಗಳ ಬಗ್ಗೆ ಯೋಚಿಸಿ, ಅವು ದ್ವಿಚಕ್ರ ವಾಹನ, ತ್ರಿಚಕ್ರ ವಾಹನ, ನಾಲ್ಕು ಚಕ್ರದ ವಾಹನಗಳು ಅಥವಾ ಹೆಚ್ಚು ಇರಬಹುದು. ನೀವು ಫೋಟೋಗಳನ್ನು ಇಂಟರ್ನೆಟ್ ನಲ್ಲಿ ಹುಡುಕಬಹುದು ಮತ್ತು ಪ್ರತಿಯೊಂದು ವಾಹನಗಳಲ್ಲಿ ವಿಭಿನ್ನ ವಿವರಗಳನ್ನು ಗಮನಿಸಿ.
3. ನೀವು ಯಾವ ರೀತಿಯ ಆಕಾರಗಳನ್ನು ನೋಡಬಹುದು? ಇವೆಲ್ಲವೂ ಒಂದೇ ಗಾತ್ರದಲ್ಲಿವೆಯೇ? ಆ ಚಿತ್ರದಲ್ಲಿ ಯಾವುದು ಎದ್ದು ಕಾಣುವಂತೆ ಮಾಡುತ್ತಿದೆ?

4. ಒಂದು ವಾಹನದ ಚಿತ್ರವನ್ನು ಆರಿಸಿ ಮತ್ತು ಮನೆಯಲ್ಲಿ ಸಿಗುವ ವಸ್ತುಗಳನ್ನು ಬಳಸಿ ವಾಹನವನ್ನು ರಚಿಸಿ. ದೊಡ್ಡ ಆಕಾರಗಳೊಂದಿಗೆ ಪ್ರಾರಂಭಿಸಿ ಮತ್ತು ನಂತರ ಉತ್ತಮ ವಿವರಗಳನ್ನು ಸೇರಿಸಿ. ನಿಮ್ಮ ವಸ್ತುಗಳನ್ನು ಸೇರಿಸುವ ಮೂಲಕ ವಾಹನವನ್ನು ನೆಲದ ಮೇಲೆ ನಿಲ್ಲುವಂತೆ ಮಾಡಬಹುದು ಅಥವಾ ಅದನ್ನು ಗೋಡೆಗೆ ಒರಗಿಸಿ ನಿಲ್ಲಿಸಬಹುದು.

5. ನಿಮ್ಮ ಕಲಾಕೃತಿಯನ್ನು ನಿಮ್ಮ ಕುಟುಂಬ ಮತ್ತು ಸ್ನೇಹಿತರೊಂದಿಗೆ ಹಂಚಿಕೊಳ್ಳಿ. ನೀವು ಈ ವಾಹನವನ್ನು ಏಕೆ ಆರಿಸಿದ್ದೀರಿ ಮತ್ತು ಚಟುವಟಿಕೆಯನ್ನು ಮಾಡುವಾಗ ನಿಮಗೆ ಆಸಕ್ತಿದಾಯಕವೆನಿಸಿದ್ದನ್ನು ಅವರೊಂದಿಗೆ ಹಂಚಿಕೊಳ್ಳಿ.

*ನಮ್ಮ ಚಟುವಟಿಕೆಗಳು ನಿಮಗೆ ಆಕರ್ಷಕ ಮತ್ತು ಆಸಕ್ತಿದಾಯಕ ಎಂದು ನಿಮಗೆ ಅನಿಸಿದರೆ ನಿಮ್ಮ ಅನುಭವಗಳನ್ನು ಫೇಸ್ ಬುಕ್ ಮತ್ತು ಇನ್ಸ್ಟಾಗ್ರಾಮ್ ನಲ್ಲಿ ಹಂಚಿಕೊಳ್ಳಬಹುದು @artsparksfoundation ಎಂದು ಟ್ಯಾಗ್ ಮಾಡಿ. ನಮ್ಮ ಇತರೆ ಚಟುವಟಿಕೆಗಳ ಮಾಹಿತಿಗಳಿಗಾಗಿ ನೀವು ನಮ್ಮನ್ನು ಅನುಸರಿಸಬಹುದು. ನೀವು ಮಾಡಿದ ಚಟುವಟಿಕೆಯ ಕಲಾಕೃತಿಗಳ ಚಿತ್ರಗಳು ಮತ್ತು ಅನುಭವಗಳನ್ನು ನೀವು mtombing.artsparks@gmail.com ಗೆ ಕಳುಹಿಸಬಹುದು.*

*ArtSparks Foundation*

ARTSPARKS
CURIOSITY. CREATIVITY. LEARNING.

[*www.art-sparks.org*](http://www.art-sparks.org)